

# ಆರ್ಧರ್ಧ ಚಹಾ

ಇಂಥದ್ದೇ ಮಳೆಗಾಲವಾಗಿತ್ತಲ್ಲವೆ
ನಾವಲ್ಲಿಗೆ ಹೋದಾಗ
ಜಾರು ಕಣಿವೆಗೆ ಹಾಡು ಕಲಿಸಿದ್ದೆವು
ಜಲಪಾತಕ್ಕೆ ನೊರೆಯ ನಾಚಿಕೆ
ಹಿಂಡುಬಿದಿರಿಗೊಂದು ಪುಂಡುಕತೆ
ಹುಲ್ಲುಗಾವಲಿಗೆ ಬಕುಳಗಂಧ

ಮತ್ತೀಗ ಎಷ್ಟು ಅಪರೂಪಕ್ಕೆ
ಸಿಕ್ಕಿದ್ದೆ ನೀನು
ಏನೇನೊ ಕನಸಿದ್ದೆ ನಾನು

ರುಧಿರ ತೋಯದಿ ಭೂಮಿ
ಕೆಸರಾದ ಸುದ್ದಿ ಸಿಕ್ಕಿರಲಿಲ್ಲ



ಹೂತ ರಥ ಮೇಲೆತ್ತುವ ಕಲೆ
ಭಾನುನಂದನ ಕಲಿತಿಲ್ಲ
ಜಂಗುಳವ ಜಾರಿದ ಜಯಸಿರಿ
ಹರಾಜಾದ ಹಿರಿಬೆಲೆ ಅಂದಾಜಿಗಿಲ್ಲ

ಕಾಯಂ ತಿರುಗುವ ಬಸ್ಸು
ಕೆಟ್ಟು ನಿಂತಂತೆ
ತಣಿದ ಚಹ ಬಿಸಿ ಮಾಡಿದ
ರುಚಿಹೀನ ಗುಟುಕು ನಾಲಿಗೆ ಸುಟ್ಟಿತು
ಮಳೆಮಂತ್ರ ಮರೆತ ಮೋಡ
ಝುಳಪಿಸುವ ಬಿಸಿಲ ಕೋಲು
ಸರ್‍ರನೆ ಉಕ್ಕಿದ ಹಾಲೀಗ
ಪೂರ್ತಿ ಒಲೆಯ ಪಾಲು
ಬಿಗಿ ಮುಷ್ಟಿಯಲ್ಲಿ
ಹಿಡಿದಿಟ್ಟಿದ್ದೇನೆಂಬ ಭ್ರಮೆ ತೀರಿ
ಬಿಡಿಸಿದ ಬೆರಳಲ್ಲಿ ಮೌನ ಸೋಲು

ಗಿರಿನೆತ್ತಿ ಹತ್ತಿ ಕುಣಿದ ನವಿಲು
ಒಂದೊಂದೇ ಇಳಿದು ಸಾಗಿ
ದಿವಾನಖಾನೆಯ ಬೀಸಣಿಕೆಯಾಗಿ
ಹೊಳೆಯುಗಲ ಬಾಗಿದ ಮರ
ನೆರಳ ಮುದ್ದಿಸುವ ನೀರೊಣಗಿ
ಒಣಮರಳ ರಂಗೋಲಿ ನಿಗಿನಿಗಿ

ಮತ್ತೆ ಹೆಪ್ಪಿಡಬಹುದೆ ಮುಗಿಲು
ಹೊಕ್ಕಳ ಪಕ್ಕ ಕಿರುಬೆರಳ ನವಿರು
ನೆಲ್ಲಿಮರದಡಿಯಲ್ಲಿ ಗೆಜ್ಜೆ ಕಟ್ಟಿ ಆಣಬೆ
ತಂಪೂಡಬಹುದೆ ಸಿಹಿಗಾಳಿ ಮೋಹ
ಜೊತೆಯಾಗಿ ಕೂತು ಕುಡಿಯಬಹುದೆ
ಆರ್ಧರ್ಧ ಕಪ್ಪು ತಾಜಾ ಚಹಾ

● ಪ್ರಜ್ಞಾ ಮತ್ತಿಹಳ್ಳಿ

ಕಲೆ: ವಾಗೀಶ ಹೆಗಡೆ